# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಡಾ: ಎಂ.ಜಿ. ಮುಳೆ**
**(ವಿಧಾನಸಭೆಯಿಂದ ಚುನಾಯಿತರಾದವರು)**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2209**

**ಉತ್ತರಿಸಬೇಕಾದ ದಿನಾಂಕ : 26-03-2026**

**ಉತ್ತರಿಸಬೇಕಾದ ಸಚಿವರು : ಸನ್ಮಾನ್ಯ ಮುಖ್ಯಮಂತ್ರಿ**

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ್ ಜಿಲ್ಲೆಯಲ್ಲಿ ಪ್ರಸ್ತುತ ದಿನನಿತ್ಯ ಸಂಗ್ರಹವಾಗುತ್ತಿರುವ ಸರಾಸರಿ ಹಾಲಿನ ಪ್ರಮಾಣ (ಲೀಟರ್‌ಗಳಲ್ಲಿ) ಎಷ್ಟು; ಕಳೆದ ಎರಡು ವರ್ಷಗಳ ಅವಧಿಯಲ್ಲಿ ಹಾಲು ಉತ್ಪಾದನೆಯಲ್ಲಿ ಏರಿಕೆ ಅಥವಾ ಇಳಿಕೆ ಕಂಡಿದೆಯೇ: (ತಾಲ್ಲೂಕುವಾರು ಹಾಗೂ ವರ್ಷವಾರು ಮಾಹಿತಿ ನೀಡುವುದು) | ಬೀದರ್ ಜಿಲ್ಲೆಯಲ್ಲಿ ಪ್ರಸ್ತುತ ದಿನನಿತ್ಯ ಸಂಗ್ರಹವಾಗುತ್ತಿರುವ ಸರಾಸರಿ ಹಾಲಿನ ಪ್ರಮಾಣ 44,628 ಲೀಟರ್.<br><br>ಕಳೆದ ಎರಡು ವರ್ಷಗಳಲ್ಲಿ ಹಾಲು ಉತ್ಪಾದನೆಯಲ್ಲಿ ಏರಿಕೆ ಕಂಡುಬಂದಿದ್ದು, ತಾಲ್ಲೂಕುವಾರು ಮತ್ತು ವರ್ಷವಾರು ಮಾಹಿತಿ ಈ ಕೆಳಕಂಡಂತಿರುತ್ತದೆ. |
| ಆ) | Karnataka Milk Federation (KMF) ಅಡಿಯಲ್ಲಿ ಬೀದರ್ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹಾಲು ಉತ್ಪಾದಕರ ಸಹಕಾರ ಸಂಘಗಳ (MPCS) ಒಟ್ಟು ಸಂಖ್ಯೆ ಎಷ್ಟು; ಕಳೆದ ಎರಡು ವರ್ಷಗಳಲ್ಲಿ ಹೊಸ MPCS ಗಳನ್ನು ಸ್ಥಾಪಿಸಲು ರೈತರಿಂದ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ಎಷ್ಟು ಸಂಘಗಳಿಗೆ ಅನುಮೋದನೆ ನೀಡಲಾಗಿದೆ; | Karnataka Milk Federation (KMF) ಬೀದರ್ ಜಿಲ್ಲೆಯಲ್ಲಿ ಒಟ್ಟು 269 ಹಾಲು ಉತ್ಪಾದಕರ ಸಹಕಾರ ಸಂಘಗಳ (MPCS) ಕಾರ್ಯನಿರ್ವಹಿಸುತ್ತಿವೆ. ಕಳೆದ ಎರಡು ವರ್ಷಗಳಲ್ಲಿ ಹೊಸ MPCS ಗಳನ್ನು ಸ್ಥಾಪಿಸಲು ಬಂದಿರುವ ಅರ್ಜಿಗಳ ಸಂಖ್ಯೆ ಕೆಳಕಂಡಂತಿದೆ.<br><br>(ಕೋಷ್ಟಕ ಕೆಳಗೆ)<br><br>ಕಳೆದ ಎರಡು ವರ್ಷಗಳಲ್ಲಿ ಹೊಸ MPCS ಗಳನ್ನು ಸ್ಥಾಪಿಸಲು ಒಟ್ಟು 59 ಸಂಘಗಳಿಗೆ ಅನುಮೋದನೆಗೊಂಡು ಕಾರ್ಯಾಚರಣೆಯಲ್ಲಿರುತ್ತವೆ. |

(ಅ) ಉತ್ತರದ ಕೋಷ್ಟಕ:

| ಕ್ರ.ಸಂ. | ತಾಲ್ಲೂಕು | ಹಾಲು ಶೇಖರಣೆ ದಿನವೊಂದಕ್ಕೆ (ಕೆ.ಜಿ.ಗಳಲ್ಲಿ) (2023-24) | ಹಾಲು ಶೇಖರಣೆ ದಿನವೊಂದಕ್ಕೆ (ಕೆ.ಜಿ.ಗಳಲ್ಲಿ) 2024-25 |
|---|---|---|---|
| 1 | ಬೀದರ | 6730 | 7231 |
| 2 | ಔರಾದ | 11,119 | 6752 |
| 3 | ಹುಮನಾಬಾದ್ | 7586 | 8332 |
| 4 | ಬಸವಕಲ್ಯಾಣ | 5267 | 6763 |
| 5 | ಭಾಲ್ಕಿ | 3345 | 6465 |
| | ಒಟ್ಟು | **34,047** | **35,543** |

(ಆ) ಉತ್ತರದ ಕೋಷ್ಟಕ:

| ವರ್ಷ | ಅರ್ಜಿಗಳ ಸಂಖ್ಯೆ |
|---|---|
| 2023-24 | 37 |
| 2024-25 | 22 |
| ಒಟ್ಟು | 59 |

| | | |
|---|---|---|
| ಇ) | ಜಿಲ್ಲೆಯ ಎಲ್ಲಾ ಹಾಲು ಸಂಗ್ರಹಣಾ ಕೇಂದ್ರಗಳಲ್ಲಿ ಹಾಲಿನ ಗುಣಮಟ್ಟ ಕಾಪಾಡಲು ಅಗತ್ಯವಿರುವ ಶೀತಲೀಕರಣ ಸೌಲಭ್ಯಗಳು (Bulk Milk Coolers-BMC) ಮತ್ತು ಹಾಲು ಪರೀಕ್ಷಾ ಯಂತ್ರೋಪಕರಣಗಳು ಲಭ್ಯವಿದೆಯೇ; ಶೀತಲೀಕರಣ ಸೌಲಭ್ಯವಿಲ್ಲದ ಕೇಂದ್ರಗಳಿಂದ ಹಾಲು ಮುಖ್ಯ ಡೈರಿಗೆ ಸಾಗಿಸುವಾಗ ಉಂಟಾಗುವ ನಷ್ಟ ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಹೊಸ BMC ಗಳನ್ನು ಸ್ಥಾಪಿಸಲು ಮೀಸಲಾದ ಅನುದಾನ ಎಷ್ಟು; | ಜಿಲ್ಲೆಯ ಎಲ್ಲಾ ಹಾಲು ಸಂಗ್ರಹಣಾ ಕೇಂದ್ರಗಳಲ್ಲಿ ಹಾಲಿನ ಗುಣಮಟ್ಟ ಕಾಪಾಡಲು ಅಗತ್ಯವಿರುವ ಶೀತಲೀಕರಣ ಸೌಲಭ್ಯ (IMCU) ಮತ್ತು ಹಾಲು ಪರೀಕ್ಷಾ ಯಂತ್ರೋಪಕರಣಗಳು ಲಭ್ಯವಿರುತ್ತದೆ.<br><br>ಈ ಹಿಂದೆ ಬೀದರ್ ಜಿಲ್ಲೆಯಲ್ಲಿ ಬರುವ ಬಿ.ಎಂ.ಸಿ.ಗಳಲ್ಲಿ ಹಾಲು ಶೇಖರಣೆ ಕಡಿಮೆಯಾಗಿರುವುದರಿಂದ ಘಟಕಗಳ ವೆಚ್ಚ ದುಬಾರಿಯಾಗುತ್ತಿರುವುದರಿಂದ ಸ್ಥಗಿತಗೊಳಿಸಿ, 30,000 ಲೀ. ಸಾಮರ್ಥ್ಯದ IMCU ಘಟಕವನ್ನು ಚೀನಕೇರಾದಲ್ಲಿ ಸ್ಥಾಪಿಸಲಾಗಿರುತ್ತದೆ. ಮುಖ್ಯ ಡೇರಿಗೆ ಹಾಲನ್ನು ರವಾನೆ ಮಾಡುವಾಗ ನಷ್ಟ ಉಂಟಾಗುವುದಿಲ್ಲ.<br><br>ಹೊಸ ಬಿ.ಎಂ.ಸಿ.ಗಳನ್ನು ಸ್ಥಾಪಿಸಲು ಅನುದಾನವನ್ನು ಮೀಸಲಿಟ್ಟಿರುವುದಿಲ್ಲ. |
| ಈ) | ಹಾಲು ಉತ್ಪಾದಕರಿಗೆ ಸರ್ಕಾರ ನೀಡುತ್ತಿರುವ ಪ್ರತಿ ಲೀಟರ್ ರೂ.5 ಪ್ರೋತ್ಸಾಹಧನ (Incentive) ಕಳೆದ ಆರು ತಿಂಗಳಿನಿಂದ ಬಾಕಿ ಇರುವುದೇ; ಬಾಕಿ ಇರುವ ಒಟ್ಟು ಮೊತ್ತ ಎಷ್ಟು; ಈ ಮೊತ್ತವನ್ನು ರೈತರ ಬ್ಯಾಂಕ್ ಖಾತೆಗಳಿಗೆ ಯಾವ ಕಾಲಮಿತಿಯೊಳಗೆ ಜಮೆ ಮಾಡಲಾಗುವುದು? | ಪ್ರಸ್ತುತ ಡಿಸೆಂಬರ್-2025 ರ ಮಾಹೆಯ 106 ಸಾಮಾನ್ಯ ವರ್ಗದ ಮತ್ತು ಪರಿಶಿಷ್ಟ ಜಾತಿ 462 ಮತ್ತು ಪರಿಶಿಷ್ಟ ಪಂಗಡ-463 ವರ್ಗದ ಫಲಾನುಭವಿಗಳಿಗೆ ಜನವರಿ-2026 ರವರೆಗೆ ಪ್ರೋತ್ಸಾಹಧನ ಪಾವತಿಯಾಗಿರುತ್ತದೆ. ಬಾಕಿ ಇರುವ ಪ್ರೋತ್ಸಾಹಧನ ಬಿಡುಗಡೆಯಾದ ತಕ್ಷಣ ಪಾವತಿಗೆ ಕ್ರಮವಹಿಸಲಾಗುವುದು.<br><br>ಕಲಬುರಗಿ ಹಾಲು ಒಕ್ಕೂಟ ವ್ಯಾಪ್ತಿಯ ಬೀದರ್ ಜಿಲ್ಲೆಯ 2026ರ ಜನವರಿ ಮಾಹೆಯ ಪ್ರೋತ್ಸಾಹಧನದ ಮೊತ್ತ ರೂ.45,22,441 ಗಳು ಬಾಕಿ ಇರುತ್ತದೆ.<br><br>ಬಾಕಿ ಇರುವ ಪ್ರೋತ್ಸಾಹಧನ ಬಿಡುಗಡೆಯ ನಿರೀಕ್ಷಣೆಯಲ್ಲಿದ್ದು, ಬಿಡುಗಡೆಯಾದ ತಕ್ಷಣ ಪಾವತಿಗೆ ಕ್ರಮವಹಿಸಲಾಗುವುದು. |

**ಕಡತ ಸಂಖ್ಯೆ: ಸಿಒ 53 ಸಿಸಿಬಿ 2026**

**(ಸಿದ್ದರಾಮಯ್ಯ)**
ಮುಖ್ಯಮಂತ್ರಿ